<u>ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.</u>

ಸಿ.ಸಿ.ನಂ.56/2013

ಪಿ.ಡಬ್ಲ್ಯೂ -07

ಸಿ.ಡಬ್ಲ್ಯೂ-25

ಸಾಕ್ಷಿದಾರನ ಹೆಸರುಃ- ಧರ್ಮೇಂದ್ರ ಹೆಚ್. ಎನ್

ತಂದೆಯ ಹೆಸರು ಹೆಚ್. ಟಿ. ನಂಜಪ್ಪ

ವಯಸ್ಸು 58 ವರ್ಷ

ಉದ್ಯೋಗ ACP. CCB

ವಾಸ ಬೆಂಗಳೂರು

**<u>ಸಾಕ್ಷಿಗೆ ದಿಃ 09.03.2026 ರಂದು ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಕಲಂ 299 ಅಡಿಯಲ್ಲಿ ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ದಿಃ 07.09.2012 ರಿಂದ 14.09.2016 ರವರೆಗೆ ನಾನು ಕುಣಿಗಲ್ ವೃತ್ತದಲ್ಲಿ ವೃತ್ತ ನೀರಿಕ್ಷಕನಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 07.09.2012 ಈ ಪ್ರಕರಣದ ಕಡತವನ್ನು ಚಾಸಾ 24 ಅವರಿಂದ ಪಡೆದು ಅಲ್ಲಿಯವರೆಗಿನ ತನಿಖೆಯನ್ನು ಪರಿಶೀಲಿಸಿ ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಚಾಸಾ 23 ರ ಅವರ ನೇತೃತ್ವದಲ್ಲಿ ಒಂದು ತಂಡವನ್ನು ಆರೋಪಿಯ ಪತ್ತೆಗಾಗಿ ನೇಮಕ ಮಾಡಿರುತ್ತೇನೆ ದಿಃ 08.02.2013 ರಂದು ಚಾಸಾ 23, 15 ರಿಂದ 19 ಮತ್ತು 21 ರವರು ಇಬ್ಬರು ವ್ಯಕ್ತಿಗಳನ್ನು ವರದಿಯೊಂದಿಗೆ ನನ್ನ ಮುಂದೆ ಹಾಜರುಪಸಿಡಿದ್ದು ಅವರನ್ನು ವಿಚಾರಣೆ ಮಾಡಿ ಅವರು ತಪ್ಪು ಒಪ್ಪಿಕೊಂಡ ಮೇರೆಗೆ ಚಾಸಾ 5 ಮತ್ತು 6 ಅವರನ್ನು ಬರಮಾಡಿಕೊಂಡು ಅವರ ಸಮಕ್ಷಮ ಮದ್ಯಾಹ್ನ 3 ರಿಂದ 4 ಗಂಟೆಯ ಸಮಯದಲ್ಲಿ ಅಂಗ ಶೋದನೆ ನಡೆಸಿದಾಗ ಆರೋಪಿತರ ಬಳಿ 1 ಮೊಬೈಲ್ ಫೋನ್ ಮತ್ತು 1 ಕೆಂಪು ಚೀಲದಲ್ಲಿ ಬಂಗಾರದಂತೆ ಕಾಣುವ 2 ಕಾಸಿನ ಸರಗಳು ಇದ್ದು ಅವುಗಳನ್ನು ಪರಿಶೀಲಿಸಲಾಗಿ ಅವು ನಕಲಿ ಚಿನ್ನದ ಸರಗಳೆಂದು ಕಂಡು ಬಂದಿರುತ್ತದೆ.

ನಂತರ ದೃಶಾವಳಿಗಳ ಫೋಟೋಗಳನ್ನು ತಗೆದು ಅವುಗಳನ್ನು ಪಂಚನಾಮೆಯ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅವುಗಳನ್ನು ಮಾಲು ಪಟ್ಟಿ ನಂ 128/2013 ರಲ್ಲಿ ನಮೂದಿಸಿ ನ್ಯಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಆರೋಪಿ ಸರೋಜಮ್ಮಾ ಅವರನ್ನು ವಿಚಾರಣೆ ಮಾಡಿ ಸ್ವ ಇಚ್ಚೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿ ಅವರ ಮತ್ತು ಅವರ ತಮ್ಮ ರಾಮಪ್ಪ ಹಾಗೂ ನಾಗಮ್ಮಾ 3 ಜನರು ಸೇರಿ ಹು.ದುರ್ಗ ಮತ್ತು

ಕುಣಿಗಲ್ ಠಾಣಾ ವ್ಯಪ್ತಿಯ 5 ಸ್ಥಳಗಳಲ್ಲಿ ವಯಸ್ಸಾದ ಹೆಂಗಸರಿಂದ ಆಭರಣಗಳನ್ನು ಕಳ್ಳತನವನ್ನು ಮಾಡಿಕೊಂಡು ಹೋದ ಬಗ್ಗೆ ಹೇಳಿರುತ್ತಾರೆ. ನಮ್ಮ ಜೊತೆ ಬಂದಲ್ಲಿ ನಾವು ಮೇಲ್ಕಂಡ ಸ್ಥಳದಲ್ಲಿ ಒಂಟಿ ವಯಸ್ಸಾದ ಹೆಂಗಸರಿಂದ ಚಿನ್ನದ ಒಡವೆಗಳನ್ನು ಕಳ್ಳತನ ಮಾಡಿರುವ ಸ್ಥಳಗಳನ್ನು ಮತ್ತು ಒಡವೆಗಳನ್ನು ಮಾರಾಟ ಮಾಡಿರುವ ಬೆಂಗಳೂರಿನ ಯಲಹಂಕದ ಬಸ್ ನಿಲ್ದಾಣದ ಬಳಿ ಇರುವ ಗಿರವಿ ಅಂಗಡಿಯನ್ನು ಮತ್ತು ಆ ಅಂಗಡಿಯ ಮಾಲಿಕ ಸುಮಾರು 65 ವಯಸ್ಸಿ ನೆ ಬೆಳ್ಳನೇಯ ಮೈ ಬಣ್ಣವುಳ್ಳ ಮತ್ತು ಹಣೆಯ ಮೇಲೆ 1 ಕಪ್ಪನೆಯ ಗಂಟು ಇರುವ ವ್ಯಕ್ತಿಯನು ಮತ್ತು ಬೆಂಗಳೂರಿನ ರಾಜಾ ಮಾರ್ಕೇಟ್‌ಟ ನಲ್ಲಿರುವ ಗಿರವಿ ಅಂಗಡಿಯನ್ನು ತೋರಿಸುತ್ತೇನೆಂದು ನನ್ನ ಮಂದೆ ಹೇಳಿಕೆ ನೀಡಿರುತ್ತಾರೆ. ಅದೇ ರೀತಿ ಇನ್ನೊಬ್ಬ ಆರೋಪಿ ರಾಮಪ್ಪ ಸಹ ನನ್ನ ಮುಂದೆ ಅದೇ ರೀತಿ ಸ್ವ ಇಚ್ಛಾ ಹೇಳಿಕೆಯನ್ನು ನೀಡಿರುತ್ತಾರೆ.

ನಂತರ ಚಾಸಾ 23 ಅವರಿಗೆ ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಹೇಳಿದಂತೆ ಕೃತ್ಯ ನಡೆದ ಸ್ಥಳವನ್ನು ತೊರಿಸಿದ ಮೇರಗೆ ಚಾಸಾ 23 ಅವರನ್ನು ನೇಮಿಸಿ ಪಂಚರೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಆರೋಪಿತರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಚಾಸಾ 23 ಅವರು ಆರೋಪಿ ತೋರಿಸಿದ 4 ಸ್ಥಳಗಳ ಸ್ಥಳ ಪಂಚನಾಮೆಯ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳ್ನು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 21.02.2013 ರಂದು ಆರೋಪಿತರನ್ನು ಮುಂದಿನ ತನಿಖೆಗಾಗಿ ನ್ಯಾಯಾಲಯದ ಆದೇಶದ ಮೇರೆಗೆ ಪೋಲಿಸ ವಶಕ್ಕೆ ಪಡೆದು ಚಾಸಾ 23 ಅವರಿಗೆ ಆರೋಪಿತರು ಕೃತ್ಯ ನಡೆದ ಸ್ಥಳದಲ್ಲಿ ವಶಪಡಿಸಿಕೊಂಡ ಒಡವೆಗಳನ್ನು ಗಿರವಿ ಇಟ್ಟ ಅಂಗಡಿಯನ್ನು ತೋರಿಸುವುದಾಗಿ ಹೇಳಿದ್ದು ಅವರನ್ನು ಚಾಸಾ 23 ಅವರೊಂದಿಗೆ ಕಳುಹಿಸಿ ಕೊಟ್ಟಿರುತ್ತೇನೆ. ದಿಃ 22.02.2013 ರಂದು ಚಾಸಾ 23 ಅವರು ಆರೋಪಿ 1 ಮತ್ತು 2 ಅವರಿಂದ ಬೆಂಗಳೂರಿನ ಯಲಹಂಕದ ಬಸ್ ನಿಲ್ದಾಣದ ಹತ್ತಿರ ಇರುವ ಸುರರ್ಣ ಮತ್ತು ಹರಿಹಂತ ಬ್ಯಾಂಕಸ್ಸ ಗಿರವಿ ಅಂಗಡಿಯಿಂದ ಒಟ್ಟು 7 ವಸ್ತುಗಳನ್ನು ವಶಪಡಿಸಿಕೊಂಡ ಬಗ್ಗೆ ಪಂಚನಾಮೆಯನ್ನು ಮಾಡಿದ್ದು ಅವುಗಳನ್ನು ಹಾಜರುಪಡಿಸಿದ್ದು ಪರಿಶೀಲಿಸಿಕೊಂಡು ಮಾಲು ಪಟ್ಟಿ ನಂ 22/2013 ರಲ್ಲಿ ನಮೂದಿಸಿ ನಿವೇದಿಸಿಕೊಂಡಿರುತ್ತೇನೆ.

ಬೆಂಗಳೂರು ನಗರಪೇಟೆಯ ಕೋಹಿನೂರು ಅಂಗಡಿಯಿಂದ 4 ಒಡೆವೆಗಳನ್ನು ವಶಪಡಿಸಿಕೊಂಡಿದ್ದು ಅವುಗಳನ್ನು ಹಾಜರುಪಡಿಸಿದ್ದು ಪರಿಶೀಲಿಸಿಕೊಂಡು ಮಾಲು ಪಟ್ಟಿ ನಂ 21/2013 ರಲ್ಲಿ ನಮೂದಿಸಿ ನಿವೇದಿಸಿಕೊಂಡಿರುತ್ತೇನೆ. 3ನೇ ಆರೋಪಿ ನಾಗಮ್ಮ ಅವರನ್ನು ಪತ್ತೆಗಾಗಿ ಚಾಸಾ 23 ಅವರ ನೇತೃತ್ವದಲ್ಲಿ 1 ತಂಡವನ್ನು ನೇಮಿಸಿರುತ್ತೇನೆ.

ನಂತರ ಚಾಸಾ 1 ಮತ್ತು 2 ಅವರನ್ನು ಬರಮಾಡಿಕೊಂಡಿದ್ದು ಆರೋಪಿ 1 ಮತ್ತು 2 ಅವರನ್ನು ನೋಡಿ ಗುರುತಿಸಿದ್ದು ಮತ್ತು ಕಳ್ಳತನವಾಗ ಒಡವೆಗಳನ್ನು ಗುರುತಿಸಿದ್ದು ಅವರ ವಿಚಾರಣೆ ಮಾಡಿ ಪ್ರತ್ಯಕ ಮರು ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಆರೋಪಿ 1 ಮತ್ತು 2 ಅವರನ್ನು ರಿಮ್ಯಾಂಡ ಅರ್ಜಿಯ ಮೇರೆಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಚಾಸಾ 9 ರಿಂದ 14 ಅವರ ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಕುಣಿಗಲ್ ಪೊ. ಠಾಣೆಯಿಂದ ಅಪರಾದ ನಂ 44/2013, 48/2013, 49/2013 ಮತ್ತು 50/2013 ಇದೇ ಆರೋಪಿಗಳು ಮಾಡಿದ ಕೃತ್ಯಗಳ ದಾಖಲಾತಿಗಳನ್ನು ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ.

ಮೇಲಿನ ಪ್ರಕರಣಕ್ಕೆ ಸಂಬಂದ ಪಟ್ಟ ಒಡವೆಗಳನ್ನು ನ್ಯಾಯಲಯದ ಅನುಮತಿಯ ಮೇರೆಗೆ ಮುಂದಿನ ತನಿಖೆಗಾಗಿ ಸಂಬಂದ ಪಟ್ಟ ತನಿಖಾಧಿಗಳಿಗೆ ನೀಡಿರುತ್ತೇನೆ. ನಂತರ ನನ್ನ ಇಲ್ಲಿಯವರೆಗಿನ ತನಿಖೆಯಲ್ಲಿ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯಾದಾರಗಳು ಲಬ್ಯ ವಾಗಿದ್ದು ಆರೋಪಿ 3 ಅವರ ವಿರುದ್ದ ತಲೆಮರಿಸಿಕೊಂಡ ಬಗ್ಗೆ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈ ಪ್ರಕರಣದಲ್ಲಿ ಈಗಾಗಲೇ ಆರೋಪಿ 1 ಮತ್ತು 2 ಅವರ ವಿರುದ್ದ ಪ್ರಕರಣ ದಾಖಲಾಗಿ ಸಿಸಿ 43/2013 ಪ್ರಕರಣದಲ್ಲಿ ಮೂಲ ಎಫ್.ಐ.ಆರ್ ಮತ್ತು ದಾಖಲೆಗಳು ಇರುತ್ತವೆ.

ಚಾಸಾ 24 ಅವರು ಈಗ ಮರಣ ಹೊಂದಿದ್ದು ಎಫ್.ಐ. ಆರ್ ಗೆ ಇರುವ ಅವರ ಸಹಿಯನ್ನು ಗುರುತಿಸುತ್ತೇನೆ ಅದನ್ನು ನಿ.ಪಿ 2 ಎಂದು ಸಹಿ ನಿ.ಪಿ 2(ಎ) ಎಂದು ಗುರುತಿಸಲಾಯಿತು. ಆರೋಪಿ ದಸ್ತಗಿರಿ ಮತ್ತು ಅಮಾನತ್ತು ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 3 ಎಂದು ಸಹಿ ನಿ.ಪಿ 3(ಎ) ಎಂದು ಗುರುತಿಸಲಾಯಿತು. ಚಾಸಾ 23 ಅವರು ನೀಡಿದ ವರದಿಯನ್ನು ನಿ.ಪಿ 4 ಎಂದು ಸಹಿ ನಿ.ಪಿ 4(ಎ) ಎಂದು ಗುರುತಿಸಲಾಯಿತು. 3 ಪಿ.ಎಫ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ 5 ರಿಂದ 7 ಎಂದು ಸಹಿ ನಿ.ಪಿ 5(ಎ) ಯಿಂದ ನಿ.ಪಿ 7(ಎ) ಎಂದು ಗುರುತಿಸಲಾಯಿತು. ಆರೋಪಿಯ ಸ್ವ ಇಚ್ಛಾ ಹೇಳಿಕೆಗಳನ್ನು ಹಾಜರುಪಸಿಡಿದ್ದು ಅವುಗಳನ್ನು ನಿ.ಪಿ 8 ಮತ್ತು 9 ಎಂದು ಸಹಿ ನಿ.ಪಿ 8(ಎ) ಮತ್ತು  ನಿ.ಪಿ 9(ಎ) ಎಂದು ಗುರುತಿಸಲಾಯಿತು.

**<u>ಮರು ವಿಚಾರಣೆ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ, ಕುಣಿಗಲ್